ಖಾಯಿಷುಪಟ್ಟು ಆರಿಸಿಕೊಂಡೆ. ಲಗ್ನವಾಗಿ ಸ್ವಾತಂತ್ರ್ಯ ಕಳೆದುಕೊಳ್ಳುವುದಕ್ಕೂ ಜೈಲುರಸ್ತೆಗೂ ಏನೂ ಸಂಬಂಧ ಇರಲಿಲ್ಲ. ಒಂದೊಮ್ಮೆ ಇದ್ದರೂ ನಾನು ಬಿಡಾಡಿ ಸ್ವಾತಂತ್ರ್ಯ ಕಳೆದುಕೊಂಡು ಸಂಸಾರದ ಸೆರೆಯಲ್ಲಿ ಕೈದಿಯಾಗಲು ಆತ್ಮಸಂತೋಷದಿಂದ ಸಿದ್ಧನಾಗಿದ್ದೆ.

ಅದೊಂದು ಹೆಂಚಿನಮನೆ. ರೈಲುಬೋಗಿಯಂತಿದ್ದು ನಡುವೆ ಅಡ್ಡಗೋಡೆ ಎಬ್ಬಿಸಿ ಕೋಣೆಗಳನ್ನಾಗಿ ವಿಭಜಿಸಲಾಗಿತ್ತು. ಗಜದಂತದಂತೆ ಬಾಗಿದ ಎರಡು ತೆಂಗಿನಮರಗಳು ನೆರೆಮನೆ ಅಂಗಳದಲ್ಲಿ ಬೇರುತಳೆದು, ತಲೆಯನ್ನು ಮನೆಯ ಮೇಲ್ಛಾವಣಿಯ ಮೇಲಕ್ಕೆ ತಂದು, ತಿಂಗಳಿಗೊಮ್ಮೆ ಹಣ್ಣಾಯನ್ನೊ ಗರಿಯನ್ನೊ ಬಾಂಬಿನಂತೆ ಬೀಳಿಸುತ್ತಿದ್ದವು. ಅದರಲ್ಲಿ ಹಿಂದೆ ಜಟಕಾಸಾಬರು ಬಾಡಿಗೆಗಿದ್ದರಂತೆ. ಪುರಾವೆಯಂತೆ ಮನೆಸುತ್ತ ಲದ್ದಿಗುಡ್ಡೆಗಳೂ, ಹುರುಳಿ ಬೇಯಿಸುವ ಬೂದಿಬಡಕ ಒಲೆಗಳೂ ಇದ್ದವು. ಸಿಹಿಮೊಗೆಯ ರಸ್ತೆಗಳಿಗೆ ಆಟೊಗಳು ಇಳಿದು ಜಟಕಾ ನಿರುದ್ಯೋಗಿಯಾದ ಬಳಿಕ, ಕುದುರೆಗೆ ಸಕಾಲದಲ್ಲಿ ಹುಲ್ಲುಹುರುಳಿ ಸಿಗದಂತಾಗಿತ್ತು. ಕುದುರೆಯ ಮಾಲೀಕ ಬಾಡಿಗೆ ಕೊಡುವ ಬಾಬತ್ತು ದೂರವುಳಿಯಿತು. ಸುಸ್ತಿದಾರರಾಗಿದ್ದ ಜಟಕಾ ಸಾಬರನ್ನು ಉಪಾಯವಾಗಿ ಬಿಡಿಸಿದ ಮಾಲೀಕರು, ಸಂಬಳದಾರನಾದ ನನಗೆ ಕೊಡಮಾಡಿದರು. ಮಾತ್ರವಲ್ಲ, ತರುಣ ಅಧ್ಯಾಪಕನ ಗೌರವಾರ್ಥವಾಗಿ ತಿಪ್ಪೆತೆಗೆಸಿ, ಗಿಡಗಂಟೆ ಸವರಿ, ಗೋಡೆಗಳಿಗೆ ಸುಣ್ಣಬಳಿದು, ಹೊಸಗೇಟು ಹಾಕಿಸಿ, ಕಿಟಕಿಬಾಗಿಲಿಗೆ ಬಣ್ಣಕೊಟ್ಟರು. ಇದುವೇ ತಪ್ಪಾಯಿತು. ಮದುಮಗಳಂತೆ ಸಿಂಗಾರಗೊಂಡ ಮನೆ, ಹಾದಿಹೋಕರನ್ನು ಬೆಡಗಿನಿಂದ ಸೆಳೆಯತೊಡಗಿತು. ಯಾರೊ ಕಿಡಿಗೇಡಿಗಳು ಹೆಚ್ಚಿನ ಬಾಡಿಗೆ ಕೊಡುವ ಪ್ರಸ್ತಾಪ ಇಡಲಾಗಿ, ಬೀಗದಕೈ ಹಸ್ತಾಂತರ ಕಾರ್ಯಕ್ರಮ ವಿಲಂಬವಾಗತೊಡಗಿತು. ಮದುವೆ ದಿನ ಸಮೀಪಿಸುತ್ತಿರಲು ನಾನು ಆತಂಕಿತನಾದೆ. ನವವಧುವನ್ನು ಕಂಡವರ ಪಡಸಾಲೆಯಲ್ಲಿ ಇಳಿಸುವ ಅಪ್ಪನ ಪರಂಪರೆ ಮರುಕಳಿಸುವ ಎಲ್ಲ ಸಾಧ್ಯತೆಗಳು ಗೋಚರಿಸತೊಡಗಿದವು.

ಆದರೆ ಚರಿತ್ರೆ ಪುನರಾವರ್ತನೆ ಮಾಡದಿರಲು ದೃಢಸಂಕಲ್ಪ ಮಾಡಿದೆ. ಮನೆಯ ಕಬ್ಜಾ ಪಡೆಯಲು ಸ್ವಾತಂತ್ರ್ಯ ಹೋರಾಟಕ್ಕೆ ಕಮ್ಮಿಯಿಲ್ಲದ ಒಂದು ಯತ್ನ ಮಾಡಿದೆ. ಅದಾದರೂ ಜರುಗಿದ್ದು ಹೀಗೆ: ಇದ್ದ ರೂಮನ್ನು ಖಾಲಿಮಾಡಿ, ಹೊಸಮನೆ ಸಿಗದೆ ಪಿಂಡಿಪೆಠಾರಿಯನ್ನು ಗೆಳೆಯರ ಮನೆಯಲ್ಲಿಟ್ಟು ನಿರಾಶ್ರಿತನಾಗಿದ್ದೆನಷ್ಟೆ. ಕಾಲೇಜಿನಲ್ಲಿ ಪಾಠ ಪ್ರವಚನಕ್ಕಿಂತ ಸಾರ್ವಜನಿಕರ ಲೌಕಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ಖ್ಯಾತರಾದ ಒಬ್ಬ ಇತಿಹಾಸ ಅಧ್ಯಾಪಕರಿದ್ದರು. ಸ್ಥಳೀಕರಾದ ಅವರು ಊರಿನ ವರ್ತಮಾನ ಭವಿಷ್ಯ ಚೆನ್ನಾಗಿ ಅರಿತವರು. ಅವರಲ್ಲಿ ಕಷ್ಟ ನಿವೇದಿಸಿಕೊಂಡೆ. 'ಇದಕ್ಯಾಕೆ ಚಿಂತೆ ಮಾಡ್ತೀಯ? ತಡಿ, ಏನಾದರೊಂದು ಮಾಡಣ' ಎಂದವರೇ ಒಬ್ಬ ಮಾಜಿ ರೌಡಿಯಲ್ಲಿಗೆ ನನ್ನನ್ನು ಕರೆದೊಯ್ದರು. ಅವರಿಬ್ಬರು ಒಳಗೆ ಕುಳಿತು ಅದೇನು ಗುಸುಪುಸು ಮಾಡಿದರೊ ತಿಳಿಯಲಿಲ್ಲ; ಐವತ್ತು ರೂಪಾಯಿ ಫೀಸನ್ನು ಕಾರ್ಯಾಚರಣೆಗೆ ಮುನ್ನವೇ ತೆರಬೇಕಾಯಿತು. ನರಿಬಂದು ಕುಂಡೆ ಮೂಸುವಷ್ಟು ಮುದಿಯಾಗಿದ್ದ ಈ ಮಾಜಿಹುಲಿ, ನನ್ನ ಒಂದೇ ಹೊಡೆತಕ್ಕೆ ನೆಲಕಚ್ಚುವಷ್ಟು ಸಣಕಲಾಗಿದ್ದನು. ಅಧೋಜಗತ್ತಿಗೆ ಹೊಸ ತಲೆಮಾರಿನ ಪ್ರತಿಭೆಗಳು ಆಗಮಿಸಿದ್ದರಿಂದಲೂ, ಕುಡಿಕುಡಿದು ಮೈತ್ರಾಣವೆಲ್ಲ ಇಳಿದುಹೋಗಿದ್ದರಿಂದಲೂ, ಅನ್ಯಮಾರ್ಗವಿಲ್ಲದೆ ಇದ್ದಿಲ ಅಂಗಡಿ ಇಟ್ಟುಕೊಂಡಿದ್ದನು. ಅವನಿಗೆ ಸಣ್ಣ ಇದ್ದಿಲಮೂಟೆ ಎತ್ತುವುದಕ್ಕೂ ತ್ರಾಣವಿರಲಿಲ್ಲ. ವಿವಾದ ಬಗೆಹರಿವ ಭರವಸೆ ನನ್ನೊಳಗೆ ಹುಟ್ಟಲಿಲ್ಲ. ಆದದ್ದಾಗಲಿ ಎಂದು ಇಬ್ಬರನ್ನೂ ಮುಸ್ಸಂಜೆ